


“ಬಹಳ ಹಿಂದೆ ಒಂದು ಅಗಾಥಾ ಕ್ರಿಸ್ಟಿಯ ಒಂದು ಕತೆ ಓದಿದ್ದೆ ಅದರಲ್ಲಿಯೂ ಹೀಗೆ. ಒಂದು ಮನೆ. ಒಂದು ಸಾವು ಆರು ಏಳು ಜನ ಮನೆಯಲ್ಲಿ ಇದ್ದಾರೆ. ಇಲ್ಲಿಯೂ ಅದೇ ತರಹದ ಘಟನೆ. ಒಂದು ರೀತಿ ನೋಡಿದರೆ ಎಲ್ಲರೂ ಶಂಕಿತ ವ್ಯಕ್ತಿಗಳೇ...”

ಅಷ್ಟರಲ್ಲಿ ಪೇದೆ ಬಂದು ‘‘ಸಾರ್ ಹಾಲಿನವ ಬಂದಿದ್ದಾನೆ’’ ಎಂದ.

“ಸರಿ ನೀವು ಈ ಬಾಡಿಯನ್ನು ಪೋಸ್ಟ್‌ಮಾರ್ಟಂಗೆ ಕಳಿಸಿ” ಎಂದು ಹಾಲಿನವನ ಕಡೆ ತಿರುಗಿದರು.

ಸುಮಾರು ಇಪ್ಪತ್ತೈದು ವಯಸ್ಸಿನ ಯುವಕ ಮಹಾನಗರದಲ್ಲಿದ್ದರೂ ಹಳ್ಳಿಯ ಮುಗ್ಧನಂತಿದ್ದ ನಾಗೇಶ ಭಯದಿಂದಲೇ ನಮಸ್ಕಾರ ಮಾಡಿ “ಬರ ಹೇಳಿದರಂತೆ ಸಾರ್, ನನಗೇನೂ ಗೊತ್ತಿಲ್ಲ ಸಾರ್. ನಾನು ಹೊರಗಡೆಯಿಂದ ಹಾಲು ಹಾಕಿ ಹೋಗ್ತೀನಿ ಸಾರ್... ಯಾವತ್ತೂ ಈ ಮನೆ ಒಳಗಡೆ ಬಂದೇ ಇಲ್ಲ. ದುಡ್ಡಿಗೆ ಕೂಡ ಒಳಗಡೆ ಬರಲ್ಲ”ಎಂದು ಭಯದಿಂದ ಅಳಲು ಶುರು ಮಾಡಿದ.

“ನಿಲ್ಲಿಸಯ್ಯ ನೀನೇನು ಕೊಲೆ ಮಾಡಿದೆ ಅಂತ ಕರೆಸಿಲ್ಲ. ದಿನಾ ಎಷ್ಟು ಹೊತ್ತಿಗೆ ಬರ್ತೀಯಾ